# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: M/s Four EF wind Power Private Limited ಕಂಪನಿಗೆ ಹಂಚಿಕೆಯಾಗಿರುವ 9.00 ಮೆ. ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Devarahippargi Wind Power Private Limited ವರ್ಗಾಯಿಸಲು ಹಾಗೂ ತದನಂತರ ಸದರಿ 9 ಮೆ.ವ್ಯಾ. ಸಾಮರ್ಥ್ಯವನ್ನು 100 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಿ ಕಾಲಾವಕಾಶ ನೀಡುವ ಕುರಿತು.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 456 ಎನ್‌ಸಿಇ 2006 ದಿನಾಂಕ: 22.5.2007.

2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 444 ಎನ್‌ಸಿಇ 2010 ದಿನಾಂಕ: 20.12.2010

3) ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಎನ್ 444 ಎನ್‌ಸಿಇ 2010 ದಿನಾಂಕ: 02.7.2010

4) ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ಪತ್ರ ಸಂಖ್ಯೆ: KRED/08/DWPPL-9 MW to 100 MW (FEFW)/2015/1256 ದಿನಾಂಕ: 27.04.2015.

* * *

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ M/s. Four EF wind Power Private Limited ಕಂಪನಿಗೆ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ 62.5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರಿ ಆದೇಶದಲ್ಲಿ ಸದರಿ ಕಂಪನಿಗೆ ಹಂಚಿಕೆ ಮಾಡಲಾಗಿದ್ದ 62.5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 58.5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗಳನ್ನು ಬಿಜಾಪುರ, ಬಳ್ಳಾರಿ, ಬೆಳಗಾವಿ ಧಾರವಾಡ ಮತ್ತು ರಾಯಚೂರು ಜಿಲ್ಲೆಗಳಿಗೆ ಸ್ಥಳಾಂತರಿಸಿ, ಯೋಜನೆಯನ್ನು 31.03.2012 ರೊಳಗೆ ಅನುಷ್ಠಾನಗೊಳಿಸಲು ಆದೇಶಿಸಲಾಗಿತ್ತು. ಆದರೆ, ಸದರಿ ಆದೇಶದ ಕ್ರಮ ಸಂಖ್ಯೆ 1 ಮತ್ತು 4ರ ಶೆಡ್ಯೂಲ್‌ನಲ್ಲಿ ನಮೂದಿಸಿರುವ ಕ್ರಮವಾಗಿ 9 ಮೆ.ವ್ಯಾ. ಮತ್ತು 5 ಮೆಗಾ ವ್ಯಾಟ್‌ಗಳನ್ನು ಹೆಚ್ಚುವರಿಯಾಗಿ ಸೇರಿಸಿದ್ದನ್ನು ಗಮನಿಸದೆ 58.5 ಮೆ.ವ್ಯಾ. ಎಂದು ನಮೂದಿಸಿರುವುದನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಸರ್ಕಾರದ ತಿದ್ದುಪಡಿ ಆದೇಶದಲ್ಲಿ ಸದರಿ ಸಾಮರ್ಥ್ಯವನ್ನು 72.5 ಮೆ.ವ್ಯಾ.ಗೆ ಎಂದು ನಮೂದಿಸಿ ತಿದ್ದುಪಡಿ ಆದೇಶ ಹೊರಡಿಸಲಾಗಿತ್ತು.

ಪ್ರಸ್ತುತ ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, M/s. Four EF wind Power Private Limited ಕಂಪನಿಯವರು, ತಮ್ಮ ಕಂಪನಿಗೆ ಸರ್ಕಾರದ ವಿವಿಧ ಆದೇಶಗಳಲ್ಲಿ ಬಿಜಾಪುರ, ಬಳ್ಳಾರಿ, ಬೆಳಗಾವಿ, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹಂಚಿಕೆಯಾಗಿರುವ 72.5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಪೈಕಿ ಬಿಜಾಪುರ ಜಿಲ್ಲೆಯ ಕವಲಗಿ ಮತ್ತು ಕುವಟ್ಗಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 9.00 ಮೆ.ವ್ಯಾ. ಅಂಶಿಕ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Devarahipparagi Wind Power Private Limited ಕಂಪನಿಗೆ ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 100 ಮೆ.ವ್ಯಾ.ಗೆ ಹೆಚ್ಚಿಸಿ, ಯೋಜನೆಯಿಂದ ಉತ್ಪತ್ತಿಯಾಗುವ ವಿದ್ಯುತ್ತನ್ನು ಮಾರಾಟ ಮಾಡುವ ಕುರಿತು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ಪೂರಕ ವಿದ್ಯುತ್ ಖರೀದಿ ಒಡಂಬಡಿಕೆ ಮಾಡಿಕೊಳ್ಳುವ ಅಥವಾ ಮೂರನೇ ವ್ಯಕ್ತಿಗೆ ಮಾರಾಟ ಮಾಡಲು ಅನುಮತಿಸುವಂತೆ ಕೋರಿ ಡಿಪಿಆರ್ ಸಲ್ಲಿಸಿದ್ದು, ವರ್ಗಾವಣೆಯಾಗಲಿರುವ 9.00 ಮೆ.ವ್ಯಾ. ಅಂಶಿಕ ಸಾಮರ್ಥ್ಯದ ಯೋಜನೆಗೆ ದಿನಾಂಕ: 22.5.2013 ರಿಂದ ಅನ್ವಯಿಸಿ ಕಾಲಾವಧಿ ವಿಸ್ತರಣಾ ಶುಲ್ಕ ಹಾಗೂ ನಿಯಮಾನುಸಾರ ಪಾವತಿಸಬೇಕಾಗಿರುವ ಎಲ್ಲಾ ಶುಲ್ಕಗಳನ್ನು

—2)

ಕಂಪನಿಯು ಪಾವತಿಸತಕ್ಕದೆಂದು ಷರತ್ತು ವಿಧಿಸಿ ಪ್ರಸ್ತಾವನೆಯನ್ನು ಪರಿಗಣಿಸಬಹುದೆಂದು ಶಿಫಾರಸ್ಸು ಮಾಡಿ ಯೋಜನೆಗೆ ಸಂಬಂಧಿಸಿದ ತಾಂತ್ರಿಕ ವಿವರಗಳು, ಸ್ಥಳದ ಮಾಹಿತಿ ಅಕ್ಷಾಂಶ ಮತ್ತು ರೇಖಾಂಶ ಇನ್ನಿತರೆ ಯೋಜನಾ ವರದಿಗಳನ್ನು ಒದಗಿಸುತ್ತಾ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ:-

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 118 ಎನ್‌ಸಿಇ 2015,**
**ಬೆಂಗಳೂರು, ದಿನಾಂಕ: 25.7.2015.**

M/s. Four EF wind Power Private Limited ಕಂಪನಿಗೆ ಬಿಜಾಪುರ, ಬಳ್ಳಾರಿ, ಬೆಳಗಾವಿ, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹಂಚಿಕೆಯಾಗಿರುವ 72.5 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಪೈಕಿ, ಬಿಜಾಪುರ ಜಿಲ್ಲೆಯ ಕವಲಗಿ ಮತ್ತು ಕುವಟ್ಗಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 9.00 ಮೆ.ವ್ಯಾ ಅಂಶಿಕ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s. Devarahipparagi Wind Power Private Limited ಕಂಪನಿಗೆ ವರ್ಗಾಯಿಸಿ, ಯೋಜನೆಯ ಸಾಮರ್ಥ್ಯವನ್ನು 100 ಮೆ.ವ್ಯಾಗೆ ಹೆಚ್ಚಿಸಿ, ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು **ಆದೇಶಿಸಲಾಗಿದೆ:-**

**Schedule**

| Toposheet No | Nearby Villages of the proposed area and district | Geographical areas description of the project | Sanctioned /Transfer capacity in MW | Enhancement proposed in MW | Total capacity (No.of WTGs & rating in kW |
|---|---|---|---|---|---|
| 47 P/9 & 47P/13 | Kaulagi, Kamatagi (Don River), Bijapur Taluk, Bijapur district | The proposed area is a vast ground level plain situated on the East and South East and South of Bijapur Town. It has presence of water bodies, Dony river NH 17 state highway and railway lines. Further, it appears to have private ownership and has agricultural activity. The average elevation of the area varies from 580 to 680. The area is held in the following Geographical co-ordinates:<br>**Latitude:** 16°45'0"-16°50'0"N<br>**Longitude:** 75°45'0"- 75°55'0" E<br>**Ridge peaks:** 588.1, 589.1, 583.7, 568, 593, 595, & 597 m Amsl | 09 MW | 91 MW | 100 MW<br>(50 X 2000 kW) |

1 M/s. Devarahipparagi Wind Power Private Limited ಕಂಪನಿ ರವರು 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 2011 ದಿನಾಂಕ 06.1.2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

--3)

2 M/s. Devarahipparagi Wind Power Private Limited ಕಂಪನಿಯು ಈ ಯೋಜನೆಯಿಂದ ಉತ್ಪಾದಿಸುವ ವಿದ್ಯುತ್‌ನ್ನು ಸಂಬಂಧಿಸಿದ ಎಸ್ಕಾಂಗೆ ಮಾರಾಟ ಮಾಡುವ ಅಥವಾ ವೀಲಿಂಗ್ ಮತ್ತು ಬ್ಯಾಂಕಿಂಗ್ ಮೂಲಕ 3ನೇ ವ್ಯಕ್ತಿಗೆ ಮಾರಾಟ ಮಾಡುವ ಕುರಿತು ಸಂಬಂಧಿಸಿದ ಎಸ್ಕಾಂನೊಂದಿಗೆ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

3 M/s. Devarahipparagi Wind Power Private Limited ಕಂಪನಿಯು ಸದರಿ ಯೋಜನೆಯನ್ನು 2016ನೇ ಸಾಲಿನೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.

4 ಅಭಿವೃದ್ಧಿದಾರರುಗಳು ಯೋಜನೆಗೆ ಸಂಬಂಧಿಸಿದಂತೆ (ಮೂಲ ಮತ್ತು ಪ್ರಸ್ತುತ ಆದೇಶಗಳನ್ವಯ) ಕೆ.ಆರ್.ಇ.ಡಿ.ಎಲ್. ಸಂಸ್ಥೆಗೆ ಪಾವತಿಸಲು ಬಾಕಿ ಇರುವ ಎಲ್ಲಾ ತರಹದ ಶುಲ್ಕಗಳನ್ನು ಪಾವತಿಸತಕ್ಕದ್ದು.

5 ಈ ಆದೇಶವನ್ನು ರದ್ದು ಪಡಿಸುವ/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಮೂಲ ಹಂಚಿಕೆ ಆದೇಶದಲ್ಲಿನ ಮತ್ತು ಯೋಜನೆಗೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ಇತರೆ ಎಲ್ಲಾ ಆದೇಶಗಳಲ್ಲಿನ ಷರತ್ತು ಮತ್ತು ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ.ಎ.ಚಪ್ಪರಬಂದ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,
☎ 22034674.

25/7/15

**ಇವರಿಗೆ:**
ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಇವರಿಗೆ ಪ್ರಕಟಣೆಗಾಗಿ.

**ಪ್ರತಿ:**

1 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ / ಕಂದಾಯ ಇಲಾಖೆ/ ಬಹುಮಹಡಿ ಕಟ್ಟಡ ವಿಕಾಸ ಸೌಧ, ಬೆಂಗಳೂರು-1.
2 ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-9.
4 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು.
5 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ.39, 'ಶಾಂತಿಗೃಹ', ಭಾರತ್ ಸ್ಕೌಟ್ಸ್ & ಗೈಡ್ಸ್ ಬಿಲ್ಡಿಂಗ್, ಅರಮನೆರಸ್ತೆ, ಮಹಾರಾಣಿ ಕಾಲೇಜಿನ ಹಿಂಭಾಗ, ಬೆಂಗಳೂರು-1.
6 ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆ, ಬಿಜಾಪುರ.
7 ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿಜಾಪುರ ಜಿಲ್ಲೆ, ಬಿಜಾಪುರ .
8 ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ
9 M/s. Devarahipparagi Wind Power Private Limited, Suit No. 701 and 702, 7th Floor, Prestige Meridian-II, M.G.Road, Bangalore-560001.
10 M/s. Four EF wind Power Private Limited, Flat No. 9, Lucellee Court, Berlie Street, Langford Town, Bangalore-560025 .
10 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
11 ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
12 ಶಾಖಾ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.